ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಶಾಸಕರು

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE : 11/10/2020

## ಸರಕಾರಿ ಆಸ್ಪತ್ರೆ ಸೌಲಭ್ಯವಿದ್ದರೂ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಜನಪ್ರತಿನಿಧಿಗಳು

# ಆಸ್ಪತ್ರೆ ಬಿಲ್‌ಗೆ ಶಾಸಕರ ಬೇಡಿಕೆ

11/10/20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕರೋನಾ ಸೋಂಕು ತಗುಲಿದ್ದ ಶಾಸಕರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಬಿಲ್ ಪಾವತಿ ಮಾಡಿ ಎಂಬ ಬೇಡಿಕೆ ಇಡುವ ಮೂಲಕ ಸರಕಾರದ ಬೊಕ್ಕಸಕ್ಕೆ ಮತ್ತಷ್ಟು ಹೊರೆ ಮಾಡುತ್ತಿದ್ದಾರೆ.

ಕರೋನಾ ಆರಂಭಗೊಂಡ ದಿನದಿಂದಲೂ ರಾಜ್ಯದಲ್ಲಿ ಸರಕಾರಿ ಆಸ್ಪತ್ರೆಯಲ್ಲಿ ಉತ್ತಮ ಸೇವೆ ನೀಡಲಾಗುತ್ತಿದೆ. ಆದರೂ ಅನೇಕ ಜನಪ್ರತಿನಿಧಿಗಳು ಸರಕಾರಿ ಆಸ್ಪತ್ರೆ ಬದಲಿಗೆ ಖಾಸಗಿ ಆಸ್ಪತ್ರೆಗಳತ್ತ ಮುಖಮಾಡಿದ್ದಾರೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಶಾಸಕರ ಪೈಕಿ 10 ಶಾಸಕರು ಆಸ್ಪತ್ರೆ ಬಿಲ್ ರಸೀದಿಗಳನ್ನು ಸಚಿವಾಲಯದ ಮುಂದಿಟ್ಟಿದ್ದಾರೆ. 10 ಶಾಸಕರ ಹಾಗೂ ಅವರ ಕುಟುಂಬ ಸದಸ್ಯರ ಬಿಲ್ ಬರೋಬ್ಬರಿ 35 ಲಕ್ಷ ರು. ಆಗಿದ್ದು, ಇದೀಗ ಈ ಮೊತ್ತವನ್ನು ಸರಕಾರ ಭರಿಸಬೇಕಿದೆ.

→ 11

### ಬೆನಕೆ ಕುಟುಂಬದ್ದೇ ಅತಿಹೆಚ್ಚು ಬಿಲ್

ವಿಧಾನಸಭಾ ಸಚಿವಾಲಯದಿಂದ ಆರ್ಥಿಕ ಇಲಾಖೆಗೆ ಹೋಗಿರುವ 10 ಶಾಸಕರ ಬಿಲ್‌ಗಳ ಪೈಕಿ ಅತಿಹೆಚ್ಚು ಬಿಲ್ ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಅನಿಲ್ ಬೆನಕೆ ಅವರ ಕುಟುಂಬದ್ದಾಗಿದೆ. ಅವರ ಚಿಕಿತ್ಸೆಗೆ 1,92,000 ಖರ್ಚಾಗಿದ್ದು, ಅವರ ಪತ್ನಿ ಮನಿಷಾ, ಪುತ್ರಿ ಅಂಜಲಿ, ಲೀಲಾ ಅವರ ಚಿಕಿತ್ಸೆಗೆ 1,35,500 ರು. ಖರ್ಚಾಗಿದೆ. ಇದರೊಂದಿಗೆ ತಂದೆ ಶೆಟ್ಟುಪ್ಪಾ ಸುಭ್ರಾವ ಹಾಗೂ ತಾಯಿ ಪಾರ್ವತಿ ಅವರ ಚಿಕಿತ್ಸೆಗೆ ಕ್ರಮವಾಗಿ 1,27,824 ಹಾಗೂ 1,29,532 ರು. ಖರ್ಚಾಗಿದೆ. ಒಟ್ಟು 8,55,589 ರು. ಬಿಲ್ ನೀಡಿದ್ದಾರೆ.

### ಯಾವ ಶಾಸಕರಿಂದ ಎಷ್ಟು ಬಿಲ್?

| ಹೆಸರು | ಸ್ವಂತ ಚಿಕಿತ್ಸೆಗೆ | ಕುಟುಂಬಸ್ಥರಿಗೆ | ಒಟ್ಟು |
|---|---|---|---|
| ದುರ್ಯೋಧನ ಐಹೊಳೆ | 1,52,959 | 1,54,154 | 3,07,113 |
| ಟಿ.ಡಿ.ರಾಜೇಗೌಡ | 2,29,247 | --- | 2,29,247 |
| ರಾಘವೇಂದ್ರ ಹಿಟ್ನಾಳ್ | 1,01,141 | 1,34,880 | 2,[illegible]6,021 |
| ಸುರೇಶ್ ಗೌಡ | --- | 2,24,279 | 2,24,279 |
| ಸಿ.ಎಂ.ನಿಂಬಣ್ಣವರ್ | 2,91,045 | ---- | 2,91,045 |
| ನಾಗನಗೌಡ ಕಂದಕೂರು | 3,29,359 | 2,22,883 | 5,52,242 |
| ಕೆ.ಪೂರ್ಣಿಮಾ | 2,29,654 | ---- | 2,29,654 |
| ಬೆಳ್ಳಿ ಪ್ರಕಾಶ್ | 1,07,112 | ---- | 1,07,112 |
| ಅನಿಲ್ ಬೆನಕೆ | 1,92,000 | 6,63,859 | 8,55,589 |
| ಬಿ.ಕೆ.ಸಂಗಮೇಶ್ವರ್ | 2,99,336 | 2,12,376 | 5,11,712 |
| ಒಟ್ಟು | 19,31,853 | 16,12,431 | 35,44,014 |

- ಆರ್ಥಿಕ ಸಂಕಷ್ಟದಲ್ಲಿ ಸರಕಾರಕ್ಕೆ ಮತ್ತೊಂದು ಹೊರೆ. 10 ಶಾಸಕರಿಂದ 35 ಲಕ್ಷ ರು. ಖರ್ಚು
- ಸಾರ್ವಜನಿಕರಿಗೆ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ, ಶಾಸಕರಿಗೆ ಮಾತ್ರ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ
- ಖಾಸಗಿ ಆಸ್ಪತ್ರೆಗಳ ಮೇಲಿರುವ ನಂಬಿಕೆ ಸರಕಾರಿ ಆಸ್ಪತ್ರೆಗಳ ಮೇಲಿಲ್ಲವೇ ಎಂಬ ಪ್ರಶ್ನೆ ಉದ್ಭವ

# ಆಸ್ಪತ್ರೆ ಬಿಲ್‌ಗೆ ಶಾಸಕರ ಬೇಡಿಕೆ

ವಿಕ 11.10.20

← ಮೂರನೇ ಪುಟದಿಂದ

ಈಗಾಗಲೇ ಬಿಲ್ ನೀಡಿರುವ ಶಾಸಕರು, ಶೀಘ್ರ ಈ ಮೊತ್ತವನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದಾರೆ. ಆದರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸೌಲಭ್ಯವಿದ್ದರೂ, ದುಬಾರಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಅಗತ್ಯವೇನಿತ್ತು ಎನ್ನುವ ಪ್ರಶ್ನೆ ಶುರುವಾಗಿದೆ.

**ಕುಮಾರಕೃಪಾ ಗೆಸ್ಟ್‌ಹೌಸ್‌ಗೆ ಬರಲಿಲ್ಲ:** ಕರೋನಾ ಸೋಂಕು ಹೆಚ್ಚಾಗುತ್ತಿದ್ದಂತೆ ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳಿಗಾಗಿ ಕುಮಾರಕೃಪಾ ಗೆಸ್ಟ್‌ಹೌಸ್‌ನ್ನು ಕೋವಿಡ್ ಕೇರ್ ಕೇಂದ್ರವನ್ನಾಗಿ ಮಾಡಲಾಗಿತ್ತು. ಆದರೆ ಈ ಕೋವಿಡ್ ಕೇರ್ ಕೇಂದ್ರದತ್ತ ಯಾವೊಬ್ಬ ಜನಪ್ರತಿನಿಧಿಯೂ ಸುಳಿಯಲಿಲ್ಲ. ಇದರೊಂದಿಗೆ ಸರಕಾರಿ ಆಸ್ಪತ್ರೆಗಳಿಗೂ ಹೋಗದೇ, ನೇರವಾಗಿ ಖಾಸಗಿ ಆಸ್ಪತ್ರೆಯತ್ತ ಮುಖಮಾಡಿದ್ದಾರೆ. ಇದೀಗ ಇಷ್ಟು ದೊಡ್ಡ ಪ್ರಮಾಣದ ಹಣವನ್ನು ಸರಕಾರದ ಮುಂದಿಟ್ಟಿರುವುದು ವಿವಾದಕ್ಕೆ ಕಾರಣವಾಗಿದೆ. ಅನಿವಾರ್ಯ ಹಾಗೂ ತುರ್ತು ಸಮಯದಲ್ಲಿ ಅಲ್ಲದೇ ಇನ್ನುಳಿದ ಅವಧಿಯಲ್ಲಿ ಸರಕಾರಿ ಆಸ್ಪತ್ರೆಗೆ ತೆರಳಿ ಬಳಿಕ ಅಲ್ಲಿಂದ ಖಾಸಗಿ ಆಸ್ಪತ್ರೆಗೆ ತೆರಳಬೇಕಿತ್ತು. ಆದರೆ ಈ ಶಾಸಕರು ನೇರವಾಗಿ ಖಾಸಗಿ ಆಸ್ಪತ್ರೆಗೆ ತೆರಳಿ, ಇದೀಗ ಈ ಹೊರೆಯನ್ನು ಸರಕಾರ ಮೇಲೆ ಹೋರಿಸುವುದು ಎಷ್ಟು ಸರಿ ಎನ್ನುವ ಪ್ರಶ್ನೆಗಳನ್ನು ಸಾರ್ವಜನಿಕರು ಕೇಳುತ್ತಿದ್ದಾರೆ.